ಓಎಸ್. ನಂ60/2022
ಡಿ.ಡಬ್ಲ್ಯೂ ಃ2

<u>ದಿನಾಂಕಃ **15.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲು ಃ ವಾದಿ ಪರ ಡಿ.ಟಿ.ಬಿ. ವಕೀಲರಿಂದಃ</u>

ನಾನು ಇದೇ ವರ್ಷದ ಮತದಾರರ ಯಾದಿಯನ್ನು ಹಾಜರುಪಡಿಸುತ್ತೇನೆ. ಈ ವರ್ಷ ಯಾವ ವರ್ಷ ಅಂದರೆ ಸಾಕ್ಷಿಯು ನಾನು ಶಾಲೆ ಕಲಿತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮತದಾರರ ಯಾದಿಯಲ್ಲಿ ನನ್ನ ತಾಯಿ ಮತ್ತು ನಮ್ಮ ತಂದೆ ಹೆಸರು ಇರುತ್ತದೆ. ನನ್ನ ತಾಯಿ ಹೆಸರು ದ್ಯಾಮವ್ವ ಇರುತ್ತದೆ. ನಾನು ಹಾಜರು ಪಡಿಸಿದ ನನ್ನ ತಾಯಿಯಾದ ದ್ಯಾಮವ್ವ ಅಂತ ಇರುವುದಿಲ್ಲ, ದ್ಯಾವುವ್ವ ಗೌಡಶ್ಯಾನಿ ಅಂತ ಇರುತ್ತದೆ ಸಾಕ್ಷಿಯು ನನ್ನ ತಾಯಿಗೆಹಾಗೇ ಕರೆಯುತ್ತಿದ್ದರು ಅಂತ ನುಡಿಯುತ್ತಾರೆ. ನಾನು ಕೇಳನ್ಯಾಯಾಲಯದಲ್ಲಿ, ಈ ನ್ಯಾಯಾಲಯದಲ್ಲಿ ದಾಖಲೆಗಳ ಪ್ರಕರಣಗಳಲ್ಲಿ ನನ್ನ ತಾಯಿ ಹೆಸರು ದ್ಯಾಮ್ವ ಗೌಡಶ್ಯಾನಿ ಅಂತ ಬರೆಸಿರುವುದಿಲ್ಲ. ನಾವು ಲಿಂಗಸೂರು ತಾಲೂಕಿನ ಹಾಲಬಾವಿ ಗ್ರಾಮದಲ್ಲಿ ಇರುತ್ತವೆ. ಮತದಾರರ ಯಾದಿಯಲ್ಲಿ ನನ್ನ ತಾಯಿ ಹೆಸರು ಹೊರತುಪಡಿಸಿ ನಿಮ್ಮ ತಂದೆ ಹೆಸರು ಇರುತ್ತದೆ ಎಂದು ಕೇಳಲು ಸಾಕ್ಷಿಯು ನಮ್ಮ ತಂದೆ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವೆಯನ್ನು ದಾಖಲಿಸಿದರ ನಂತರ 2023 ರ ಮತದಾರರ ಯಾದಿಯಲ್ಲಿ ನನ್ನ ತಂದೆಯ ಫೋಟೋನ್ನು ಲಗತ್ತಿಸಿ ಸೃಷ್ಟಿಸಿರುತ್ತೇವೆ ಅಂದರೆ ಸರಿಅಲ್ಲ.ಚೂನಾವಣಾ ಗುರತಿನ ,ಚೀಟಿಯನ್ನು 2023 ರಲ್ಲಿ ಮಾಡಿಸಿರುತ್ತೇವೆ ಅಂದರೆ ಸರಿಯಲ್ಲ. 2023 ರ ಮುಂಚೆ ನಾವು ವಿಧಾನ ಸಭಾ ಕ್ಷೇತ್ರದ ಚುನಾವಣೆಯಲ್ಲಿ ಬೈಲುಕುಂಟೆ ಗ್ರಾಮದಲ್ಲಿ ಮತದಾನನ ಮಾಡಿರುತ್ತೇವೆ. 2018 ರ ಮತದಾರರ ಯಾದಿಯನ್ನು ಹಾಜರುಪಡಿಸುತ್ತೇವೆ. ನಾವು ಆಲುಬಾವಿ ಗ್ರಾಮದಲ್ಲಿ ಮತದಾನ ಮಾಡಿರುತ್ತೇನೆ. 2024 ರಲ್ಲಿ ಮತದಾರರ ಯಾದಿಯಲ್ಲಿ ಆಲುಬಾವಿ ಗ್ರಾಮದಲ್ಲಿ ಮತದಾನ ಮಾಡಿರುತ್ತೇನೆ ಅಂದರೆ ಮತದಾನ ಮಾಡಿರುಬಹುದು. ಈಗ ನಾನು ನೋಡುತ್ತಿರುವ ದ್ಯಾಮವ್ಯ ಮತ್ತು ಲಂಕ್ಕೆಮ್ಮ ಎಂದು ಕಂಡುಬರು ಹೆಸರಿನವರು ನನ್ನ ಸಹೋದರಿ ಮತ್ತು ತಾಯಿ ಇರುತ್ತಾರೆ. ಆದ್ದರಿಂದ ಸದರಿ ಮತದಾರರ ಯಾದಿಯನ್ನು ಮುಖಾಬೆಲೆಯಾಗಿ ನಿಪಿ 80 ಎಂದು ಗುರುತಿಸಲಾಯಿತು. ಸದರಿಯವರ ಭಾವ ಚಿತ್ರಗಳನ್ನು ನಿಪಿ 80(ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ಸದರಿ ಮತದಾರರ ಯಾದಿಯಲ್ಲಿ ಸಹ ದ್ಯಾಮವ್ವ

ಅಂತ ನಮೂದು ಇದೆ ಅಂದರೆ ಸರಿ. ದ್ಯಾಮವ್ವ ಗೌಡ ಶ್ಯಾ ನಿ ಅಂತ ನಮೂದಿಲ್ಲ ಅಂದರೆ ನನಗೆ ಗೋತ್ತಿರುವುದಿಲ್ಲ. ಸಾಕ್ಷಿಗೆ ದಾಖಲೆಯನನ್ನು ತೋರಿಸಿ ಕೇಳಲಾಗಿದ ಅದು ಪಡಿತರ , ಚೀಟಿ ಎಂದು ಹೇಳುತ್ತಾರೆ. ಅದರಲ್ಲಿರುವ ಭಾವಚಿತ್ರ ನನ್ನ ತಾಯಿಯದ್ದು ಇರುತ್ತದೆ. ಸದರಿ ಪಡಿತರ ಚೀಟಿಯನ್ನು ಮುಖಬೆಲೆಯಾಗಿ ನಿಪಿ 81 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ನನ್ನ ತಾಯಿ ಪ್ರತೀ ತಿಂಗಳು ಅಂದರೆ 6 ತಿಂಗಳು ಅಕ್ಕಿ ತಗೆದುಕೊಂಡಿರುತ್ತಾ ರೆ ಅಂದರೆ ಸರಿ. ನಾವೆಲ್ಲರೂ ಆಲುಬಾವಿ ಗ್ರಾಮದಲ್ಲಿ ಇರುತೇವೆ, ಬೃ ಕುಲಎಂಟಿ ಗ್ರಾಮದಲ್ಲಿ ಇರುವುದಿಲ್ಲ ಅಂದರೆ ಸರಿಯಲ್ಲ. ನಾವು ಬಾಲಗೌಡ ಮಕ್ಕಳ್ಳಲ್ಲ , ನಾವು ಮಕ್ಕಳೆಂದು ಸುಳ್ಳು ಹೇಳುತ್ತಿದ್ದೇವೆ ಅಂದರೆ ಸರಿಯಲ್ಲ. ಈ ದಾಖಲೆಗಳನ್ನು ನನ್ನ ತಂಗಿಯ ಸಾಕ್ಷಿಯ ವಿಚಾರಣೆ ಮುಗಿದ ನಂತರ ಹಾಜರು ಪಡಿಸಿರುತ್ತೇನೆ ಅಂದರೆ ಸರಿಯಲ್ಲ.ನಾನು ಬಾಲಗೌಡ ಮಗಳಲ್ಲ, ಸದಿರಿಯವರ ಮಗಳು ಅಂತ ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)</u>

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.